ಪತ್ರಿಕೋದ್ಯಮ, ರಂಗಭೂಮಿ, ಸಾಹಿತ್ಯ, ಸಂಘಟನೆ, ಚಳವಳಿ – ಹೀಗೆ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿರುವ ವಿಜಯಾ (ಜನನ: ಮಾರ್ಚ್ 10, 1942) ಮೂಲತಃ ದಾವಣಗೆರೆಯವರು. ಬೆಂಗಳೂರು ಅವರ ಕರ್ಮಭೂಮಿ. ವಿಜಯಾ ಅವರೊಂದಿಗೆ ತಳುಕು ಹಾಕಿಕೊಂಡಿರುವ 'ಇಳಾ ಮುದ್ರಣಾಲಯ' ಕರ್ನಾಟಕದ ಮುದ್ರಣ ಪರಂಪರೆಯ ಪ್ರಮುಖ ಅಧ್ಯಾಯ. 'ಕನ್ನಡ ಚಲನಚಿತ್ರ ಇತಿಹಾಸ', 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ–ಸಂಸ್ಕೃತಿ', 'ಕರ್ನಾಟಕ ಕಲಾದರ್ಶನ', 'ಬೆಂಗಳೂರು ದರ್ಶನ'ಗಳಂತ ಮಹತ್ವದ ಕೃತಿಗಳು ರೂಪುಗೊಳ್ಳುವಲ್ಲಿ ವಿಜಯಾ ಅವರ ಪಾತ್ರ ಮುಖ್ಯವಾದುದು. 'ಪರ್ವ ಒಂದು ಸಮೀಕ್ಷೆ', 'ಇನಾಂದಾರ್: ವ್ಯಕ್ತಿ, ಕೃತಿ', 'ಇಂದಿನ ರಂಗಕಲಾವಿದರು', 'ರಂಗ ಚಿಂತನೆ' ಅವರ ಕೆಲವು ಕೃತಿಗಳು. 'ಶ್ರೀರಂಗ – ರಂಗ ಸಾಹಿತ್ಯ' ಪಿಎಚ್.ಡಿ. ಮಹಾಪ್ರಬಂಧ. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಸಂದೇಶ ಪ್ರಶಸ್ತಿ , ಆರ್.ಎನ್.ಆರ್. ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಲೋಕ ಶಿಕ್ಷಣ ಟ್ರಸ್ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ 'ಅನುಪಮಾ ಪ್ರಶಸ್ತಿ', ಮಾಸ್ತಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ವಿಜಯಾ ಭಾಜನರು. ಅವರ 'ಕುದಿ ಎಸರು' ಆತ್ಮಕಥನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ.

ವಿಸ್ತಾರಕ್ಕೆ ತೆರೆದದ್ದು ಈ ಪ್ರಭಾವ. 'ಪ್ರಜಾಮತ' ಮತ್ತು 'ಮಲ್ಲಿಗೆ'ಯಲ್ಲಿ ಕೆಲಸ ಮಾಡುತ್ತಿದ್ದಾಗಲೇ ಎಚ್.ಆರ್. ಇಂದಿರಾ ಅವರು ಅನಿರೀಕ್ಷಿತವಾಗಿ ತೀರಿಕೊಂಡರು. ಅವರ ಕಾದಂಬರಿಗಳು ಆ ಕಾಲಕ್ಕೆ ಬಹು ಜನಪ್ರಿಯವಾಗಿದ್ದವು. ಅದನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಲೇಖಕಿಯರ ಸಂಘಕ್ಕೆ ಇತ್ತು. ಆ ಸಂದರ್ಭದಲ್ಲಿ ನಾನು ಇಂದಿರಾ ಅವರ ಹೆಸರಿನಲ್ಲಿ ಐದಾರು ಕಾದಂಬರಿಗಳನ್ನು ಬರೆದು ಪ್ರಕಟಿಸಿದೆ! ನನ್ನ ಅಕ್ಷರ ಪ್ರಕಾಶಕರಿಗೆ ಗೊತ್ತಾಗಬಹುದೆಂದು ಅವರ ಅಕ್ಷರವನ್ನೇ ಹೋಲುತ್ತಿದ್ದವರಿಂದ ನನ್ನ ಬರವಣಿಗೆಯನ್ನು ಕಾಪಿ ಮಾಡಿಸಿ ಪ್ರಕಾಶಕರಿಗೆ ತಲುಪಿಸ್ತಾ ಇದ್ದೆವು.

◆ **ನೀವು ಕಾದಂಬರಿಕಾರ್ತಿಯೂ ಅಂತಾಯ್ತು. ಆ ಕಾದಂಬರಿಗಳ ಹೆಸರು ಹೇಳಿ, ಅವು ಓದಲು ಸಿಗಬಹುದೆ?**

ಘೋಸ್ಟ್ ಬರವಣಿಗೆಯನ್ನು ನಾನು ಇವತ್ತು ಪರಿಗಣಿಸೋದಿಕ್ಕೆ ಇಷ್ಟಪಡೋದಿಲ್ಲ. ಇನ್ನೂ ಒಂದು ವಿಷಯ ಅಂದ್ರೆ, ನಾನು ಹೈಸ್ಕೂಲಿನಲ್ಲಿ ಇದ್ದಾಗಲೇ 'ತಾಳ ತಪ್ಪಿದ ಮೇಳ' ಎನ್ನುವ ಕಾದಂಬರಿಯನ್ನು ಬರೆದಿದ್ದೆ. ಎಲ್ಲೋ ಇಟ್ಟು ಮರೆತಿದ್ದ ಅದನ್ನು ಆನಂತರ ಪ್ರಕಟಿಸಿದೆ. ಪತ್ರಿಕೆಯೊಂದರಲ್ಲಿ ಅದು ಧಾರಾವಾಹಿಯಾಗಿಯೂ ಪ್ರಕಟವಾಯಿತು. ಕಾದಂಬರಿಯ ಪ್ರತಿಗಳು ನನ್ನ ಹತ್ತಿರ ಇಲ್ಲ. 'ಮಲ್ಲಿಗೆ'ಯಲ್ಲಿ ಸಾಕಷ್ಟು ಬದಲಾವಣೆಗಳನ್ನು ನಾನು ತಂದೆ. ಆ ಕಾಲದಲ್ಲೂ ತುಂಬಾ ಸಣ್ಣಕಥೆಗಳನ್ನು ಪ್ರಕಟಣೆಗಾಗಿ ಕಳಿಸ್ತಾ ಇದ್ದರು. ಅವುಗಳಲ್ಲಿ ಅನೇಕವು ಪ್ರಕಟಣೆಗೆ ಯೋಗ್ಯವಾಗಿರ್ತಾ ಇರಲಿಲ್ಲ. ಅದಕ್ಕೇ ನಾನು ಸಣ್ಣಕತೆಗಳನ್ನು ಬರೆಯುವವರಿಗೆ ಸಹಾಯವಾಗಲಿ ಅಂತ 'ಸಣ್ಣ ಕತೆಗಳ ಸೊಗಸು' ಅಂತ ಲೇಖನಗಳ ಸರಮಾಲೆಯನ್ನೇ ಬರೆದೆ. ಆಮೇಲೆ ಅದು ಪುಸ್ತಕರೂಪವಾಗಿಯೂ ಪ್ರಕಟವಾಯಿತು. 'ಮಲ್ಲಿಗೆ'ಯ ಸಹ ಸಂಪಾದಕಿಯಾಗಿ ಮಾಡಿದ ಕೆಲಸಗಳು ನನಗೆ ಸಂತೋಷ ಮತ್ತು ಆತ್ಮವಿಶ್ವಾಸ ಎರಡನ್ನೂ ಕೊಟ್ಟವು ಎನ್ನಬೇಕು. ಅಲ್ಲಿಯತನಕ ಮಲ್ಲಿಗೆಯನ್ನು ಮುಟ್ಟಾದವರು ಓದುವ ಪತ್ರಿಕೆ ಅಂತ ಗೇಲಿ ಮಾಡ್ತಾ ಇದ್ದರು. ನಾನು ಬಂದ ಮೇಲೆ ಅದರ ಸ್ವರೂಪ, ಗುಣಮಟ್ಟ ಎಲ್ಲವೂ ಬದಲಾದವು. ಆ ಪತ್ರಿಕೆಗೂ ನಾನು ಮಾಸ್ತಿ, ಅಡಿಗ, ಅನಂತಮೂರ್ತಿ, ಕಂಬಾರ, ವಿ.ಸೀ. ಅವರ ಸಂದರ್ಶನಗಳನ್ನು ಮಾಡಿದ್ದೆ.

◆ **ಇಲ್ಲಿಂದ ಬಹುಶಃ ನಿಮ್ಮ ಆಲೋಚನಾ ಕ್ರಮದಲ್ಲಿಯೂ ಒಂದು ಪಲ್ಲಟವಾಯಿತು ಎನ್ನಬಹುದು. ಹಾಗೆ ನೋಡಿದರೆ, ಬಲಪಂಥೀಯ ಎನ್ನಬಹುದಾದ ಹಿನ್ನೆಲೆ ನಿಮಗಿತ್ತು. ದಾವಣಗೆರೆಯ ನಿಮ್ಮ ಮನೆಗೆ**